ತಜ್ಞರು ತೋರಿಸಿಕೊಟ್ಟಿದ್ದಾರೆ. ಮೊದಲೆಲ್ಲಾ ಬರೀ ಆಫೀಸ್‌ವೇರ್‌ಗೆ ಮಾತ್ರ ಸೀಮಿತವಾಗಿದ್ದ ಬ್ಲೇಜರ್‌ಗಳು ಸಾಂಪ್ರದಾಯಿಕ ಸೀರೆಗಳ ಮೇಲೆ ಕಾಣಿಸಿಕೊಂಡು ಎಲ್ಲರ ಹುಬ್ಬೇರುವಂತೆ ಮಾಡಿವೆ. ಕಾರಣ ಈ ತರಹದ ಬ್ಲೇಜರ್‌ಗಳು ಬರೀ ಫಾರ್ಮಲ್ಸ್‌ಗಳ ಮೇಲೆ ಅದೂ ಪಾಶ್ಚಾತ್ಯ ದಿರಿಸುಗಳ ಜೊತೆ ಮ್ಯಾಚ್ ಮಾಡಿ ಧರಿಸುವುದನ್ನು ನಾವು ನೋಡೇ ಇರುತ್ತೇವೆ. ಆದರೆ ಇದೀಗ ಈ ತರಹದ ವೈವಿಧ್ಯಮಯ ಬ್ಲೇಜರ್‌ಗಳನ್ನು ಸೀರೆಯ ಮೇಲೂ ಮ್ಯಾಚ್ ಮಾಡಿ ಧರಿಸಬಹುದು ಎಂಬುದನ್ನು ವಸ್ತ್ರ ವಿನ್ಯಾಸಕಾರರು ಸಾಬೀತುಪಡಿಸಿದ್ದಾರೆ.

ಸೀರೆಯ ಜೊತೆ ಬ್ಲೇಜರ್ ಧರಿಸಿದರೆ ಎಲ್ಲರನ್ನೂ ಸೂಜಿಗಲ್ಲಿನಂತೆ ಸೆಳೆಯಬಹುದು ಎಂಬುದು ಫ್ಯಾಷನ್‌ಪ್ರಿಯರ ಲೆಕ್ಕಾಚಾರ. ದೀವಾಗಳೆಂತಲೇ ಬಾಲಿವುಡ್‌ನಲ್ಲಿ ಹೆಸರುವಾಸಿಯಾಗಿರುವ ಶ್ರದ್ಧಾ ಕಪೂರ್, ಜಾಕ್ವೆಲಿನ್ ಫರ್ನಾಂಡಿಸ್, ಕರೀನಾ ಕಪೂರ್, ವಿದ್ಯಾ ಬಾಲನ್, ಕಾಜೋಲ್ ಅವರಂತಹ ನಟಿಮಣಿಯರು ಕೂಡ ಈ ಟ್ರೆಂಡ್‌ಗೆ ಫಿದಾ ಆಗಿದ್ದಾರೆ ಎಂತಲೇ ಹೇಳಬಹುದು. ತಾವು ಹೋಗುವ ಸಭೆ, ಸಮಾರಂಭಗಳಿಗೆ ತರಹೇವಾರಿ ಸೀರೆಗಳ ಮೇಲೆ ಈ ಬ್ಲೇಜರ್ ತೊಟ್ಟು ಸಖತ್ತಾಗಿ ಮಿಂಚುತ್ತಿದ್ದಾರೆ. ಇತ್ತೀಚೆಗೆ ಸಮಾರಂಭವೊಂದರಲ್ಲಿ ಬಾಲಿವುಡ್ ನಟಿ ಶ್ರದ್ಧಾ ಕಪೂರ್ ಕಡುಗೆಂಪು ಬಣ್ಣದ ಕಾಂಜೀಪುರಂ ರೇಷ್ಮೆ ಸೀರೆಯ ಮೇಲೆ ಸಿಲ್ವರ್ ಎಂಬ್ರಾಯಿಡರಿ ವರ್ಕ್ ಮಾಡಿದ ಕಪ್ಪು ಬಣ್ಣದ ಬ್ಲೇಜರ್‌ನಲ್ಲಿ ಕಾಣಿಸಿಕೊಂಡು ಸಖತ್ತಾಗಿ ಮಿಂಚಿದ್ದು, ಇನ್‌ಸ್ಟಾದಲ್ಲಿ ಭಾರೀ ಚರ್ಚೆಗೆ ಕಾರಣವಾಯಿತು. ಹಾಗೇ ಸೋಷಿಯಲ್ ಮಿಡಿಯಾದಲ್ಲಿಯೂ ಈ ಫೋಟೊ ವೈರಲ್ ಕೂಡ ಆಯಿತು. ಈ ತರಹದ ಬ್ಲೇಜರ್ ಸಾಂಪ್ರದಾಯಿಕ– ಆಧುನಿಕ ಉಡುಗೆಗಳಿಗೂ ಸೈ ಎಂಬುದನ್ನು ಯುವ ಪೀಳಿಗೆಗೆ ವಸ್ತ್ರವಿನ್ಯಾಸಕಾರರು ತೋರಿಸಿಕೊಟ್ಟಂತಾಗಿದೆ.

ಕಾಟನ್, ಫ್ಯಾನ್ಸಿ, ಖಾದಿ, ಕ್ರೇಪ್ ಅದರಲ್ಲೂ ರೇಷ್ಮೆ ಸೀರೆಗಳ ಜೊತೆ ಸಖತ್ತಾಗಿ ಕಾಣಿಸುವ ಬ್ಲೇಜರ್‌ಗಳನ್ನು 'ಮಿಕ್ಸ್ ಅಂಡ್ ಮ್ಯಾಚ್' ಮಾಡಿ ಧರಿಸಬಹುದು. ಇದರಿಂದಾಗಿ ಸ್ಟೈಲಿಷ್ ಲುಕ್ ಪಡೆಯಬಹುದು. ಆಫೀಸ್‌ಗೆ ಸೀರೆಗಳನ್ನು ಧರಿಸಲು ಇಷ್ಟಪಡುವ ಮಹಿಳೆಯರು ಈ ತರಹದ ಬ್ಲೇಜರ್‌ಗಳನ್ನು ಧರಿಸುವುದರಿಂದ ರಿಚ್ ಲುಕ್ ಕೊಡಲು ಸಹಕಾರಿಯಾಗುತ್ತದೆ. ಐಟಿ, ಕಾರ್ಪೊರೇಟ್ ಕಚೇರಿಗಳಲ್ಲಿ ಈ ಟ್ರೆಂಡ್ ಪ್ರಚಲಿತದಲ್ಲಿದ್ದು, ಆಫೀಸ್ ಹಾಗೂ ಪಾರ್ಟಿಗಳಿಗೂ ಇದೇ ಕಾಂಬಿನೇಷನ್‌ನಲ್ಲಿ ಯುವತಿಯರು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಸಮಕಾಲೀನ ಮತ್ತು ಸಾಂಪ್ರದಾಯಿಕತೆ ಜೊತೆಗೆ ವೃತ್ತಿಪರ ಲುಕ್‌ಗಾಗಿಯೂ ಈ ಉಡುಪಿನ ಶೈಲಿ ಇದೀಗ ಟ್ರೆಂಡಿಂಗ್‌ನಲ್ಲಿದೆ. ಮೊದಲೆಲ್ಲಾ ಬರೀ ಕಪ್ಪು, ಬಿಳುಪು ಹಾಗೂ ಕಡುನೀಲಿ ಬಣ್ಣಗಳಲ್ಲಿ ದೊರೆಯುತ್ತಿದ್ದ ಬ್ಲೇಜರ್‌ಗಳು ಇದೀಗ ವಿವಿಧ ಬಣ್ಣಗಳಲ್ಲಿ ದೊರೆಯುತ್ತಿವೆ. ಇವುಗಳನ್ನು ಮಿಕ್ಸ್ ಅಂಡ್ ಮ್ಯಾಚ್ ಮಾಡಿ ಶಿಫಾನ್ ಸೀರೆ, ಸೆಮಿ ಸಿಲ್ಕ್, ಡಿಸೈನರ್ ಸೀರೆ, ಎಂಬ್ರಾಯ್ಡರಿ ವರ್ಕ್ ಸೀರೆ, ಫ್ಯಾನ್ಸಿ ಸೀರೆಗಳ ಮೇಲೂ ತೊಟ್ಟುಕೊಳ್ಳಬಹುದು.

ತಿಳಿಹಸಿರು, ನೇರಳೆ ಬಣ್ಣಗಳ ಸೀರೆಯ ಮೇಲೆ ಕಡುಬಣ್ಣದ ಬ್ಲೇಜರ್ ಧರಿಸಿದರೆ 'ಯಂಗ್ ಲುಕ್' ಪಡೆಯಬಹುದು. ಸೀರೆ ಜೊತೆ ಬ್ಲೇಜರ್ ಧರಿಸುವಾಗ ಕಾಂಟ್ರಾಸ್ಟ್ ಥೀಮ್ ಆಯ್ಕೆ ಮಾಡಿಕೊಳ್ಳಬೇಕು. ಮರೂನ್, ಹಸಿರು, ನೀಲಿ ಮುಂತಾದ ಗಾಢ ಬಣ್ಣಗಳ ರೇಷ್ಮೆ ಸೀರೆಗೆ ಬಿಳಿ ಬಣ್ಣದ ಬ್ಲೇಜರ್ ಸಖತ್ತಾಗಿ ಹೊಂದುತ್ತದೆ. ಕಪ್ಪು, ಬಿಳಿ ಅಥವಾ ತಿಳಿ ಗುಲಾಬಿ ಬಣ್ಣಗಳ ಸೀರೆಯ ಮೇಲೆ ಸಿಲ್ವರ್ ಅಥವಾ ಗೋಲ್ಡನ್ ಬಣ್ಣದ ಬ್ಲೇಜರ್ ಟ್ರೆಂಡಿಂಗ್‌ನಲ್ಲಿದೆ.

ಸ್ಟೈಲಿಷ್ ಲುಕ್ ಜೊತೆಗೆ ಬೆಚ್ಚನೆಯ ಅನುಭವ ಪಡೆಯಬೇಕು ಮತ್ತು ಸಾಂಪ್ರದಾಯಿಕ ಸೀರೆಯ ಸೊಬಗನ್ನು ಹೆಚ್ಚಿಸುವ ಉಡುಗೆಗಳನ್ನು ಧರಿಸಬಹುದು. ಸೀರೆಯ ಜೊತೆಗೆ ಗ್ಲಾಮರ್ ಲುಕ್ ನೀಡುವ ವೆಲ್ವೆಟ್ ಬ್ಲೇಜರ್, ಹೈ ನೆಕ್ ಸ್ವೆಟರ್, ಫಿಟೆಡ್ ಸ್ವೆಟರ್ ಧರಿಸಿ, ಸೀರೆಯ ಪಲ್ಲುವಿನ ಕೊನೆಯ ಭಾಗವನ್ನು ಹಿಂದಿನಿಂದ ಹೊರಗೆ ಕಾಣುವಂತೆ ಮಾಡುವುದು ಟ್ರೆಂಡ್. ಇದಲ್ಲದೆ ಸೀರೆಯ ಜೊತೆಗೆ ಲಾಂಗ್ ಜಾಕೆಟ್, ಶಾರ್ಟ್ ಜಾಕೆಟ್‌ಗಳನ್ನೂ ಧರಿಸಬಹುದು. ಇದು ವಿಶಿಷ್ಟ ಎಥ್ನಿಕ್ ಲುಕ್ ನೀಡುತ್ತದೆ. ಹಾಗೇ ಸಾಂಪ್ರದಾಯಿಕ ಸೀರೆಗೆ ಆಧುನಿಕ ಸ್ಪರ್ಶ ನೀಡಲು ಇವುಗಳ ಮೇಲೆ ಲೆದರ್ ಜಾಕೆಟ್, ಜೀನ್ಸ್ ಜಾಕೆಟ್ ಹಾಗೂ ಡೆನಿಮ್ ಜಾಕೆಟ್ ಕೂಡ ಧರಿಸಬಹುದು. ಸೀರೆ ತುಂಬಾ ಪ್ಲೇನ್ ಎನಿಸಿದರೆ ಅದರ ಮೇಲೆ ಡಿಸೈನರ್ ಜಾಕೆಟ್ ವಿತ್ ಬೆಲ್ಟ್ ಕೂಡ ಧರಿಸಬಹುದು. ■

## ಹತ್ತಿ, ಲೆನಿನ್ ವಸ್ತ್ರ ಬಳಕೆ

ಬ್ಲೇಜರ್ ಅನ್ನು ಸಾಮಾನ್ಯವಾಗಿ ಹತ್ತಿ, ಲೆನಿನ್, ಉಣ್ಣೆ ವಸ್ತ್ರಗಳಿಂದ ತಯಾರಿಸಲಾಗುತ್ತದೆ. ಹವಾಮಾನಕ್ಕೆ ಅನುಗುಣವಾಗಿ ಬ್ಲೇಜರ್ ಅನ್ನು ಧರಿಸಬಹುದು.

ಇದನ್ನು ಶರ್ಟ್, ಟಿ ಶರ್ಟ್, ಜೀನ್ಸ್, ಟ್ರೌಸರ್‌ಗಳೊಂದಿಗೆ ಧರಿಸಲಾಗುತ್ತದೆ. ಈಗೀಗ ಸೀರೆಯ ಮೇಲೂ ಬ್ಲೇಜರ್ ಧರಿಸುವುದು ಹೆಚ್ಚು ಜನಪ್ರಿಯವಾಗಿದೆ. ಇದು ಪ್ರತ್ಯೇಕ ಮೇಲುಡುಪು ಆಗಿದ್ದು, ಸೂಟ್ ಜಾಕೆಟ್‌ನಂತೆ ಸಂಪೂರ್ಣ ಸೂಟ್‌ನ ಭಾಗವಾಗಿರುವುದಿಲ್ಲ.

ಬ್ಲೇಜರ್ ಸ್ಲಿಮ್‌ಫಿಟ್ ಮತ್ತು ರಿಲ್ಯಾಕ್ಸ್ಡ್ ಫಿಟ್ ಶೈಲಿಗಳಲ್ಲಿ ಲಭ್ಯ. ಕಪ್ಪು, ನೀಲಿ, ಬೂದು, ಬಿಳಿ, ಕಂದು ಮತ್ತು ಹಸುರು ಬಣ್ಣಗಳಲ್ಲಿ ಸಿಗುವ ಬ್ಲೇಜರ್‌ಗಳು ಸೀರೆಯ ಮೇಲೆ ಸಖತ್ ಲುಕ್ ಕೊಡುತ್ತವೆ. ಮಹಿಳೆಯರು ತಾವು ಉಡುವ ಸೀರೆಯ ಬಣ್ಣಕ್ಕೆ ಅನುಗುಣವಾಗಿ ಬಳಸಬಹುದು. ಮದುವೆ, ಪಾರ್ಟಿ ಅಥವಾ ಕಚೇರಿ ಕಾರ್ಯಕ್ರಮಗಳಿಗೆ ಸೂಕ್ತವೆನಿಸಿವೆ.



